

ಬೆಳಕು ಹರಿದು ಬಹಳ ಹೊತ್ತಾಗಿತ್ತು. ಮಂಗಳೂರು ಹಂಚು ಹೊದ್ದುಕೊಂಡು ನಿಂತಿದ್ದ ಮನೆಯ ತುದಿಯಲ್ಲಿ ಬುಸಬುಸನೆ ಹೊಗೆಯಾಡುತ್ತಿದ್ದ ಚಿಮಣಿ ಪೈಪು ಅಡುಗೆ ಕೋಣೆಯಲ್ಲಿ ಚಂದ್ರನ ಇರುವನ್ನು ತಿಳಿಸುತ್ತಿತ್ತು. ಹಜಾರವೂ ಕಿವಿಗೊಟ್ಟು ಕೇಳುವಂತೆ ಒಲೆ ಮೇಲಿನ ಹಿಟ್ಟಿನೆಸರು ಕೊತ ಕೊತನೆ ಕುದಿಯುತ್ತಿತ್ತು. ಪಾತ್ರೆಯೊಳಗಿನ ಅನ್ನ ತನ್ನೊಳಗಿನ ಕಾವನ್ನು ಬಿಟ್ಟುಕೊಡುತ್ತಾ ಬಾಯ್ದೆರೆಯುತ್ತಿತ್ತು. ಬಾಡಿನೆಸರಿನ ಘಮಲು ಅರ್ಧ ಕೇರಿಯನ್ನೇ ಘಮ್ಮೆನಿಸುತ್ತಿತ್ತು. ಮೀಟಿಂಗ್ ಮಾಡಿ ಮನೆಗಳನ್ನು ಹಂಚಿಕೊಂಡವರಂತೆ ಕೇರಿಯ ನಾಯಿಗಳೆಲ್ಲ ಶಿಸ್ತುಸಂಯಮದಿಂದ ಆಯಾ ಜಗಲಿಗಳ ಮೇಲೆ ಜಾಂಡಾ ಹೂಡಿದ್ದವು. ಮುಂಜಾನೆಯೇ ಸಾಬ್ರಟ್ಟೆಯಿಂದ ಬಾಡು ತಂದು ಕೊಟ್ಟು ಹೋಗಿದ್ದ ಮಲ್ಲಣ್ಣ 'ಇದೇನಾ್ಲ ಮಗ, ಇವತ್ತು ಒಸಿ ಜಾಸ್ತಿನೇ ಘಮ್ಮಂತಾದೆ' ಎನ್ನುತ್ತಾ ಬಂದನು. ಚಂದ್ರು 'ಶುಂಠಿ ಬೆಳ್ಳುಳ್ಳಿ ಒಸಿ ಜಾಸ್ತಿನೆ ಹಾಕಿವ್ನಿ ಕಣಪ್ಪೋ' ಎಂದ. 'ಹಂಗೆ ಕಡೀಕೆ ಕೊತ್ತಂಬರಿ ಸೊಪ್ಪುನೂ ಜಾಸ್ತಿ ಹಾಕ್ಬುಡು. ಬಡ್ಡಿ ಮಗಂದು ನಾಲಿಗೆಗೆ ವಿಷ ಅಂಟುದ್ರು ಗೊತ್ತಾಗ್ಬಾರ್ದು' ಎಂದ ಮಲ್ಲಣ್ಣನ ಬಟ್ಟೆ ಬ್ಯಾಗಿನಲ್ಲಿ ಸಾರಾಯಿ ಬಾಟ್ಲಿಗಳು ತಲೆ ಎತ್ತಿ ನಿಂತಿದ್ದವು. ಒಂದನ್ನು ಎಳೆದ ಶಬ್ದ ತಿಳಿಯುತ್ತಿದ್ದಂತೆ ಒಳಗಿನಿಂದ ಚಂದ್ರು 'ಏನಪ್ಪಾ ಇವತ್ತು ಬೆಳಗ್ಗೆ ಬೆಳಗ್ಗೇನೆ ಸುರು ಹಚ್ಕಳಂಗೆ ಕಾಣ್ತದೆ' ಎಂದ. 'ಇನ್ನೇನ್ಮಾಡನ್ಲಾ? ನಿನ್ನವ್ವಾಂತು ಎದ್ದು ಬೈಯಕ್ಕಿಲ್ಲ. ಅವ್ವ ಯಾವಾಗ ಬಾಯ್ಬಿಟ್ಟು ಬೈತಳೋ ಅವತ್ತೇ ಈ ಬಾಟ್ಲಿ ಸಾವಾಸ ನಾನ್ಬುಡದು' ಎಂದು ಹಾಸಿಗೆಯ ಮೇಲೆ ಕಣ್ಬಿಟ್ಟು ಮಲಗಿದ್ದ ನೀಲವ್ವನ ಕಡೆ ನೋಡಿದ ಮಲ್ಲಣ್ಣ 'ಎದ್ದೇಳಮ್ಮಿ, ನಿಂಗೆ ಬೋ ಇಷ್ಟಾಂತ ನಿನ್ಮಗ ಬಾಡಿನೆಸರು ಮಾಡವ್ನೆ. ತಿನ್ನುವಂತೇಳಮ್ಮಿ' ಎಂದು ಸ್ವಲ್ಪ ಹೊತ್ತು ಕಾದ. ಕಣ್ಣೇವವಾಗುತ್ತಿದ್ದಂತೆ 'ನೀನೆಲ್ಲೇಳ್ತಿ... ಏಳಕ್ಕಿಲ್ಲ, ಏಳಕ್ಕಿಲ್ಲ' ಎಂದು ಸುಮ್ಮನಾದ. ಹೆಗಲ ಮೇಲಿದ್ದ ಚೌಕದಲ್ಲಿ ಬೆವರು ಒರೆಸಿಕೊಳ್ಳುತ್ತಾ ಬಂದ ಚಂದ್ರು ಮಲ್ಲಣ್ಣನಿಗೆ ಇಷ್ಟಾಂತ ತೆಗೆದಿರಿಸಿದ್ದ ಸಪ್ಪೆ ಬಾಡನ್ನು ಮುಂದಿರಿಸಿ, 'ಅದ್ಯಾಕಂಗೆ ಅವ್ವನ ಜೀವ ಹಿಂಡ್ತಿ? ಎದ್ದೇಳಪ್ಪ ಮ್ಯಾಕೆ. ಉಂಡು ಮನಿಕೋಗು' ಎಂದ. ನೀಲವ್ವನ ಕಣ್ಣಲ್ಲೂ ನೀರಾಡುತ್ತಿದ್ದನ್ನು ಒರೆಸಿ 'ಸುಮ್ಕಿರವ್ವ. ಅಪ್ಪನೇನೋ ಕುಡ್ದು ಮಾತಾಡ್ತನೆ ಅಂದ್ರೆ ನೀನೂ ಅಳದೆಯಾ. ಸುಮ್ನೆ ಮನೀಕೊ' ಎಂದ. ಚಂದ್ರುವಿನ ಕೈಹಿಡಿದು ತನ್ನತ್ತ ಎಳೆದುಕೊಂಡ ಮಲ್ಲಣ್ಣ